OS 139/2021

**ಪಿಡಬ್ಲ್ಯೂ:1 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ದಿಃ 08-12-2023**

ಪಾಟೀ ಸವಾಲು ಃ ಪ್ರತಿವಾದಿಗಳ ಪರಃ ಶ್ರೀಮತಿ ಕೆ ಎಸ್ ವಕೀಲರಿಂದಃ

ಪ್ರತಿವಾದಿಗಳು ಮೂರು ವರ್ಷದಿಂದ ಪರಿಚಯ ಇದ್ದಾರೆ. ಅವರು ರೆಂಜಾಳ ಗ್ರಾಮದವರು. ನಾನು ರೆಂಜಾಳದಿಂದ 4 ಕಿ ಮೀ ದೂರ ನಲ್ಲೂರಿನಲ್ಲಿ ವಾಸ ಇದ್ದೇನೆ. ನನಗೆ ಸೇರಿದ ಮನೆ ಹಾಗೂ ಸ್ಥಿರಾಸ್ತಿಗಳು ನಲ್ಲೂರು ಗ್ರಾಮದಲ್ಲಿ ಇದೆ. ಪ್ರತಿವಾದಿಗಳಿಗೆ ಸೇರಿದ ಸರ್ವೇ ನಂ. 169/1 ರಲ್ಲಿ 39 ಸೆಂಟ್ಸ್ ಜಾಗ ಬಿಜ್ಜು ರೋಡಿರ್ಗಸ್ ರವರಿಗೆ ದಾರ್ಖಾಸ್ತು ಆದ ಜಾಗ ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂ. 169/1 39 ಸೆಂಟ್ಸ್ ಜಾಗ ಪ್ರತಿವಾದಿಗಳಿಗೆ ಹೇಗೆ ಬಂದಿದೆ ಎಂದು ತಿಳಿದುಕೊಳ್ಳುವ ಪ್ರಯತ್ನ ಮಾಡಿರುವುದಿಲ್ಲ. 1 ನೇ ಪ್ರತಿವಾದಿ ಸಲ್ಲಿಸಿದ ಲಿಖಿತ ಹೇಳಿಕೆಯನ್ನು ತಿಳಿದುಕೊಂಡಿರುತ್ತೇನೆ. ಲಿಖಿತ ಹೇಳಿಕೆಯಲ್ಲಿ ಸರ್ವೇ ನಂ. 169/1 ರ 39 ಸೆಂಟ್ಸ್ ಜಾಗ ಬಿಜ್ಜು ರೋಡಿರ್ಗಸ್ ರವರಿಗೆ ದಾರ್ಖಾಸ್ತು ಆದ ಜಾಗ ಎಂದು ನಮೂದಿಸಿದೆ ಎಂದರೆ ಇರಬಹುದು. ನಾನು ದಾರ್ಖಾಸ್ತು ಆದೇಶವನ್ನು ಪಡೆದುಕೊಂಡು ಪರಿಶೀಲಿಸುವ ಪ್ರಯತ್ನ ಮಾಡಿರುವುದಿಲ್ಲ. ಸರ್ವೇ ನಂಬರ್ 169/1 ಅಲ್ಲದೇ 2 ನೇ ಪ್ರತಿವಾದಿಯವರಿಗೆ ಇತರ ಜಾಗ ಇದೆ ಎಂದರೆ ನನಗೆ ಗೊತ್ತಿಲ್ಲ. ಬಿಜ್ಜು ರೋಡಿರ್ಗಸ್ ರವರನ್ನು ನೋಡಿರುವುದಿಲ್ಲ. ಪ್ರತಿವಾದಿಗಳ ಪೂರ್ವಜರ ಪರಿಚಯ ಇರುವುದಿಲ್ಲ. ಪ್ರತಿವಾದಿಗಳು ವಾಸ ಇರುವ ಸರ್ವೇ ನಂಬರ್ 169/1 ಬಿಜ್ಜು ರೋಡಿರ್ಗಸ್‌ರವರು ಅಡಿಕೆ ಸಸಿ ಮತ್ತು ಇನ್ನಿತರ ಸಸಿ ನೆಟ್ಟು ಕೃಷಿ ಅಭಿವೃದಿ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ನನಗೆ ಪ್ರತಿವಾದಿಗಳ ಆಸ್ತಿಯ ಬಗ್ಗೆ ಅನುಭವ ಇಲ್ಲ. ದಾವಾ ಆಸ್ತಿ ಮತ್ತು ಪ್ರತಿವಾದಿಗಳಿಗೆ ಸೇರಿದ ಸ್ತಿರಾಸ್ತಿಗಳ ಮದ್ಯದಲ್ಲಿ ಯಾವುದೇ ಸರ್ಕಾರಿ ಜಾಗ ಇಲ್ಲ. ನನ್ನ ಸ್ತಿರಾಸ್ತಿಯನ್ನು 2012 ರಲ್ಲಿ ಅಳತೆ

ಮಾಡಿಸಿರುತ್ತೇನೆ. 2012 ರಲ್ಲಿ ಅಳತೆ ಮಾಡಿದ ಬಗ್ಗೆ ನಕ್ಷೆ ಇದೆ. ನಕ್ಷೆ ಮಾಡುವ ಮುನ್ನ ದಾವಾ ಆಸ್ತಿಯ ನೆರೆಕೆರೆಯವರಿಗೆ ಲಿಖಿತ ನೋಟಿಸು ನೀಡಿರುತ್ತೇನೆ. ಆ ಬಗ್ಗೆ ದಾಖಲೆ ಇದೆ. ಪ್ರತಿವಾದಿಗಳಿಗೆ ನಕ್ಷೆ ಮಾಡುವಾಗ ನೋಟಿಸು ನೀಡಿರುವುದಿಲ್ಲ ಎಂದರೆ ಭೂನ್ಯಾಯ ಮಂಡಳಿಯವರು ನೀಡಿರುತ್ತಾರೆ. ನಮ್ಮ ಸ್ಥಿರಾಸ್ತಿಯ ಗಡಿ ತಕರಾರು ಇರುವ ಕಾರಣ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯವರ ಹಕ್ಕಿನ ಸ್ಥಿರಾಸ್ತಿಯಲ್ಲಿ ಇರುವಂತಹ ಕೃಷಿ ಅಭಿವೃದಿಯನ್ನು ನಾನು ತೆಗೆಯಲು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 169/1 ರಲ್ಲಿ ಎಷ್ಟು ವಿಸ್ತೀರ್ಣ ಇದೆ ಎಂದು ಗೊತ್ತಿಲ್ಲ. ಸರ್ವೇ ನಂಬರ್ 169/2 ರಲ್ಲಿ 49 ಸೆಂಟ್ಸ ವಿಸ್ತೀರ್ಣ ಇದೆ. ಸರ್ವೇ ನಂಬರ್ 169/3 ರಲ್ಲಿ ಒಟ್ಟು 16 ಸೆಂಟ್ಸ ವಿಸ್ತೀರ್ಣ ಇದೆ.

ನಮ್ಮ ಸ್ಥಿರಾಸ್ತಿಯ ನೆರೆಕೆರೆ ಸುಲೋಚನ ವ್ಯಕ್ತಿ ಇದ್ದಾರೆ ಅವರಿಗೆ ಸರ್ವೇ ನಂ. 169/1 ಡಿ ಅಡಿಯಲ್ಲಿ ಸ್ವಲ್ಪ ಅಂಶ ಆಸ್ತಿ ಇದೆ. ನನ್ನ ಸ್ಥಿರಾಸ್ತಿಯ ಪಕ್ಕ ವಿಲಿಯಂ ಕೌಲ್ ಇರುವುದಿಲ್ಲ. ಬಿಜ್ಜು ರೋಡಿರ್ಗಸ್ 1 ನೇ ಪ್ರತಿವಾದಿಯ ಮಾವ. ಮೇಲೆ ಹೇಳಿದ ವ್ಯಕ್ತಿಗಳಿಗೆ ಸರ್ವೇ ನಂ. 169/1 ರಲ್ಲಿ ಸ್ವಲ್ಪ ಅಂಶ ದಾರ್ಖಾಸ್ತು ಹಕ್ಕಿನ ಅಡಿ ಮಂಜೂರಾಗಿರುತ್ತದೆ. ಅವರಿಗೆ ಮಂಜೂರಾದ ಆಸ್ತಿಗಳಿಗೆ ಅವರುಗಳು ಸ್ವಾಧೀನ ಹೊಂದಿ ಕೃಷಿ ಮಾಡಿಕೊಂಡು ವಾಸ ಇದ್ದಾರೆ. ಆ ಪೈಕಿ ಬಿಜ್ಜು ರೋಡಿರ್ಗಸ್ ರವರಿಗೆ ಮಂಜೂರಾದ ಆಸ್ತಿಗಳು ಪ್ರತಿವಾದಿಗಳಿಗೆ ವಾರೀಸು ನೆಲೆಯಲ್ಲಿ ಹಕ್ಕು ಪ್ರಾಪ್ತಿಯಾಗಿರುತ್ತದೆ ಎಂದರೆ ಸರಿ. ನನಗೆ ಹಾಗೂ ಪ್ರತಿವಾದಿಗಳಿಗೆ 3 ವರ್ಷದ ಹಿಂದೆ ಜಾಗದ ಕುರಿತು ತಕರಾರು ಪ್ರಾರಂಭವಾಗಿರುತ್ತದೆ. ಆ ಸಂಧರ್ಭದಲ್ಲಿ ಪ್ರತಿವಾದಿಗಳಿಗೆ ನೋಟಿಸು ನೀಡಿ ಅಳತೆ ಮಾಡುವ ಪ್ರಯತ್ನ ಪಟ್ಟಿರುತ್ತೇನೆ. ಆ ಕುರಿತು ತಹಶೀಲ್ದಾರ್ ರವರ ಕಛೇರಿಗೆ 5-6 ವರ್ಷದ ಅರ್ಜಿ ನೀಡಿರುತ್ತೇನೆ. ಆ ಬಗ್ಗೆ ದಾಖಲೆ ನನ್ನ ಬಳಿ ಇಲ್ಲ. ಸರ್ವೇ ಕಾರ್ಯಕ್ಕೆ ಅಗತ್ಯವಿರುವ ಶುಲ್ಕವನ್ನು ಸರ್ಕಾರಕ್ಕೆ ಪಾವತಿಸಿರುತ್ತೇನೆ. ಆ ಕುರಿತು ದಾಖಲೆ ಹಾಜರುಪಡಿಸಬಹುದು. ಆ ರೀತಿ ಅರ್ಜಿ ಕೊಟ್ಟ ನಂತರ ಸರ್ವೇ ಇಲಾಖೆಯಿಂದ ಭೂಮಾಪಕರು ಬಂದು ನನ್ನ

ಹಾಗೂ ಪ್ರತಿವಾದಿಗಳ ಸ್ಥಿರಾಸ್ತಿಯನ್ನು 6 ವರ್ಷಗಳ ಹಿಂದೆ ಅಳತೆ ಮಾಡಿರುತ್ತಾರೆ. ಆ ಕುರಿತು ನಕ್ಷೆ ಇದೆ. ಆ ಸಂಧರ್ಭದಲ್ಲಿ ಸ್ಥಿರಾಸ್ತಿಗಳ ನೆರೆಕೆರೆಯವರಿಗೆ ನೋಟಿಸು ನೀಡಿರುತ್ತೇನೆ. ದಾವಾ ಎ ಅನುಸೂಚಿ ಆಸ್ತಿಗಳ ಗಡಿ ಗುರುತು ಗೊತ್ತಿದೆ. ನಿಪಿ-5 2007 ರಲ್ಲಿ ಮಾಡಿರುತ್ತೇನೆ. ಆ ಸಂದರ್ಭದಲ್ಲಿ ನೆರೆಕೆರೆಯವರೊಂದಿಗೆ ಗಡಿ ತಕರಾರು ಇರುವುದಿಲ್ಲ. ನಿಪಿ-5 ನಕ್ಷೆಯನ್ನು ಯಾವ ನಕ್ಷೆಯ ಆಧಾರದ ಮೇರೆಗೆ ತಯಾರಿಸಲಾಗಿದೆ ಎಂದು ಗೊತ್ತಿರುವುದಿಲ್ಲ. ಸರ್ವೇ ನಂ. 169/1 ಹಾಗೂ 169/3 ನಡುವೆ ಮೊಗ್ಗು ಪಿಂಟೋ ರವರ ಆಸ್ತಿ ಇದೆ. ಅದರ ಸರ್ವೇ ನಂ. ಹಾಗೂ ವಿಸ್ತೀರ್ಣ ಗೊತ್ತಿಲ್ಲ. ಅವರ ಸ್ಥಿರಾಸ್ತಿಯಲ್ಲಿ ಕೂಡ ಕೃಷಿ ಅಭಿವೃದಿ ಇದೆ. ಸರ್ವೇ ನಂ. 169/3 ರಿಂದ 169/1 ಸ್ಥಿರಾಸ್ತಿಗೆ ಹೋಗಲು ರಸ್ತೆ ಇರುವುದಿಲ್ಲ.

ಮೊಗ್ಗು ಪಿಂಟೋ ರವರು ಅವರ ಆಸ್ತಿಯಲ್ಲಿ ಆವರಣ ಗೋಡೆಯನ್ನು ಕಟ್ಟಿ ವಾಸ ಇದ್ದಾರೆ.

ಮುಂದುವರಿದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ., ಕಾರ್ಕಳ